ಅನಿಸಿಕೊಂಡು ಪ್ರಾಣಿಗಳ ಹಾಗೆ ಬದುಕಿದಿರಿ ಅದೂ ನೆನಪಿದೆ.

ನಮ್ಮ ನೆನಪಲ್ಲೇ ಹೆದರಿ ಸುಖ ಸಂಪತ್ತು ಎಲ್ಲ ತೊರೆದು ಕಾಡು ಮೇಡು ಗವಿ ಅಂತ ತಲೆಮರೆಸಿಕೊಂಡು ಅಲೆದಿರಿ. ಹಾಗೇ ಅಲೀತಾ ಅಲೀತಾ ಪಾಂಚಾಲನ ರಾಜ್ಯಕ್ಕೆ ಬಂದಿರಿ. ಅಲ್ಲೇನೋ ಮೋಡಿ ಮಾಡಿ ಕೃಷ್ಣೆಯನ್ನು ಫಲ್ಗುಣ ಮದುವೆ ಆದಅದೂ ನೆನಪಿದೆ.

ನಿಮ್ಮ ತಾಯಿಗೆ ತಕ್ಕನಾದ ಮಕ್ಕಳಯ್ಯಾ ನೀವು.

ಒಬ್ಬ ಮದುವೆಯಾದ, ಅವಳಿಗೆ ಐದು ಜನ ಮುತ್ತಿಕೊಂಡಿರಿ

ಒಬ್ಬೊಬ್ಬರೂ ನಾಚಿಕೇನೇ ಇಲ್ಲದೆ ನಿಮ್ಮ ಆ ಪಾಪದ ಕೆಲಸ ಅದೂ ನೆನಪಿದೆ

ಆಮೇಲೆ ಶಕುನಿ ಕೈಲಿ ಸೋತು, ಆ ಕೃಷ್ಣೇ ಸಮೇತ ನೀವೆಲ್ಲಾ ನಮ್ಮ ಜೀತದವರಾದಿರಿ ಅದೂ ಚೆನ್ನಾಗಿ ನೆನಪಿದೆ.

**ಸಂಜಯ:** ನಿನ್ನ ಮಗ ಹೀಗಂದದ್ದಕ್ಕೆ ಪಾಂಡುವಿನ ಮಗನಿಗೆ ಕೋಪ ಉಕ್ಕಿತು.

ನಿನ್ನ ಮಗನ ಬಿಲ್ಲನ್ನ ತುಂಡು ಮಾಡಿದ. ಅವನ ಬಾವುಟವನ್ನ ಚಿಂದಿ ಮಾಡಿದ.

ಹಣೆ ಬಿರಿಯುವ ಹಾಗೆ ಬಾಣದಲ್ಲೊಂದು ಬಿಟ್ಟ. ಸಾರಥಿಯ ತಲೆ ಮೈ ಬೇರೆ ಬೇರೆ ಮಾಡಿಟ್ಟ.

ಆಗ ರಾಜಪುತ್ರ ಇನ್ನೊಂದು ಬಿಲ್ಲು ತೆಗೆದುಕೊಂಡ. ಕುದುರೆ ಲಗಾಮನ್ನು ತಾನೇ ಹಿಡಿದು ಭೀಮನ ಕಡೇಗೆ ಹನ್ನೆರಡು ಬಾಣ ಬಿಟ್ಟ. ಭೀಮನ ಮೈಯೆಲ್ಲಾ ಸೀಳಿಹಾಕುವ ಬಾಣಗಳು. ಭೀಮನಿಗೆ ಮೈಯೇ ಸಡಿಲಿ ಉಸಿರು ನಿಂತಹಾಗಾಯಿತು. ಎರಡು ತೋಳುಗಳನ್ನೂ ಹರಡಿಕೊಂಡು ರಥದಲ್ಲಿ ಹಾಗೇ ಪ್ರಜ್ಞೆತಪ್ಪಿ ಒರಗಿಬಿಟ್ಟ. ಮತ್ತೆ ಪ್ರಜ್ಞೆ ಬಂತು. ರೋಷ ಅಟಕಾಯಿಸಿಕೊಂಡಿತ್ತು ಅವನನ್ನ. ತನ್ನ ಘೋರವಾದ ಗದೆ ಬೀಸಿ ನಿನ್ನ ಮಗ ಎಸೆದ ಶಕ್ತಿಯನ್ನು ಪುಡಿ ಪುಡಿ ಮಾಡಿದ.

ಗಾಯಗೊಂಡ ಆನೆಯ ಹಾಗೆ ಅವನ ಗದೆಯ ಏಟಿಗೆ ನಿನ್ನ ಮಗ ಹತ್ತು ಮಾರು ಹಿಂದೆ ಹೋದ. ಬೆವರತಾ ಇದ್ದ. ನೆಲಕ್ಕೆ ಬಿದ್ದ, ಕವಚ ಒಡೀತು. ಒಡವೆಗಳು ಚೂರಾದವು. ಬಟ್ಟೆಯೆಲ್ಲಾ ಚಿಂದಿಯಾಗಿ ಹೋಗಿತ್ತು. ನೋವು ತಡೀಲಾರದೆ ಹೊರಳಾಡುತ್ತಿದ್ದ.

ರಾಜಕುಮಾರನ ಸಾರಥಿ ಸತ್ತ, ಕುದುರೆಗಳು ಸತ್ತವು, ರಥವೂ ಪುಡಿ ಪುಡಿಯಾಯ್ತು. ಅವನೂ ನೆಲದಲ್ಲಿ ಬಿದ್ದಿದ್ದ ಅದನ್ನು ನೋಡಿ ಪಾಂಚಾಲರು ಸಿಂಹನಾದ ಮಾಡಿದರು.

ಅವನು ಬಿದ್ದದ್ದು ನೋಡಿ ವೃಕೋದರ ಸಂತೋಷದಿಂದ ಗರ್ಜನೆ ಮಾಡಿದ. ಆ ದನಿ ದಿಕ್ಕು ದಿಕ್ಕೆಲ್ಲಾ ತುಂಬುವ ಹಾಗೆ. ಆ ಶಬ್ದ ಕೇಳಿ ಅಕ್ಕಪಕ್ಕದಲ್ಲಿದ್ದವರೆಲ್ಲಾ ಪ್ರಜ್ಞೆ ತಪ್ಪಿ ಕೆಳಕ್ಕೆ ಬಿದ್ದರು.

ಭೀಮ ರಥದಿಂದ ನೆಲಕ್ಕೆ ಧುಮುಕಿದ

ದುಶ್ಶಾಸನನ ಹತ್ತಿರಕ್ಕೆ ಸರ್ರನೆ ಓಡಿ ಬಂದ

ಹತ್ತಿರ ಬರುತ್ತಲೇ ಅವನ ದಾಯಾದಿ ಮಾಡಿದ್ದೆಲ್ಲವೂ ನೆನಪಿಗೆ ಬಂತು.

ಸುತ್ತಲೂ ರಾಜರು ತುಮುಲ ಕಾಳಗ ಮಾಡತಾ ಇದ್ದರು.

ದುಶ್ಶಾಸನ ನೋಡಿದ.

ಏನು ಬೇಕಾದರೂ ಮಾಡಿಬಿಡುವಂಥವನು ಭೀಮ.

ಅವನು ಹೀಗೇ ಅಂತ ಹೇಳಕ್ಕಾಗದ ಮನುಷ್ಯ.

